Sri K. H. PATIL (Minister for Agriculture and Forests. –

(*a*) No. Highest offer obtained in the tender-cum-auction has been sanctioned for the contract period of 1972–74.

(*b*) Does not arise in view of the reply furnished to clause (*a*).

(*c*) It was reported by the Deputy Registrar of Co operative Societies, Raichur that the Tanners' Industrial Co-operative Society Ltd., Koppal had not functioned during the previous two years satisfactorily and that the auditors had recommended placing the society under liquidation. In consideration of this he had advised against entrusting the lease to this society.

ಶ್ರೀ ಎಂ. ವಿರುಪಾಕ್ಷಪ್ಪ.—ತಾವು ಹೆಚ್ಚಿನ ದರಗಳಿಗೆ ಕಂಟ್ರಾಕ್ಟನ್ನು ಕೊಟ್ಟಿದ್ದೀರಿ ಎಂದು ಹೇಳಿದಿರಿ, ಅತಿ ಹೆಚ್ಚಿನ ಹಣ ಎಷ್ಟು ? ಸೊಸೈಟಿಯಿಂದ ಆಫರ್ ಆದ ಹಣ ಎಷ್ಟು ?

†ಶ್ರೀ ಕೆ ಎಚ್. ಪಾಟೀರ್.—ಸೊಸೈಟಿಯಿಂದ ಒಳ್ಳವಿ ಎಂದು ತಿಳಿಸಿಬಿಟ್ಟಿದ್ದಾರೆ. ಮೊದಲನ ಟೆಂಡರ್‌ಗೆ ಕಂಟ್ರಾಕ್ಟನ್ನು ಕೊಡಬೇಕಾಗುತ್ತದೆ, ಆಥವಾ ಆ ಮೇಲೆ ಓಪನ್ ಆಕ್ಷನ್ ಮೇಲೆ ನಿಲ್ಲ ಬೇಕಾಗುತ್ತದೆ. ಸೊಸೈಟಿಯವರು ಆಗುವುದಿಲ್ಲ ಎಂದು ಲಿಖಿತ ಮುಖಾಂತರ ತಿಳಿಸಿದ್ದಾರೆ. ಇದರಿಂದ ಎಷ್ಟು ಹಣ ಎನ್ನುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಎಂ. ವಿರುಪಾಕ್ಷಪ್ಪ.—ಸೊಸೈಟಿಗೆ ಗುತ್ತಿಗೆ ಕೊಡದೆ ಇರುವುದಕ್ಕೆ ಸೊಸೈಟಿ ತೃಪ್ತಿಕರ ವಾಗಿ ಕೆಲಸ ಮಾಡಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀರ್. —ಸೊಸೈಟಿಯವರು ಸರಿಯಾಗಿ ಕೆಲಸವಾಡುವುದಿಲ್ಲ ಎಂದು ಅದನ್ನು ಲಿಕ್ವಿಡೇಟ್ ಮಾಡುವ ಸ್ಟೇಜಿನಲ್ಲಿದೆ. ಆಡಿಟರ್ ಅವರು ರಿಪೋರ್ಟಿನಲ್ಲಿ ಇದನ್ನು ರಿಜಿಸ್ಟ್ರಾರ್ ಅವರಿಗೆ ತಿಳಿಸಿದ್ದಾರೆ. ರಿಜಿಸ್ಟ್ರಾರ್ ಅವರು ಇದನ್ನು ಫಾರೆಸ್ಟ್ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಕೂನೆಯಲ್ಲಿ ಒಂದೇ ವ್ಯಕ್ತಿಯ ಲಿರಾವ್ ಬಂದಿದೆ, ಲಿರಾವ್ ಬಾರದೆ ಇರುವ ಕೇನುಗಳನ್ನು ಕನ್‌ಸಿಡರ್ ಮಾಡಿದ್ದೇವೆ.

ಶ್ರೀ ಎಂ. ವಿರುಪಾಕ್ಷಪ್ಪ. – ಲಿರಾವನ್ನು ಸೊಸೈಟಿಗೆ ತಿಳಿಸಲಾಗಿದ್ದು ಸೊಸೈಟಿ ಈ ಹಣ ವನ್ನು ಆಫರ್ ಮಾಡಿದ್ದು ತಮ್ಮ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಅದನ್ನು ತಿಳಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಅದು ನನ್ನ ಗಮನಕ್ಕೆ ಬಂದಿಲ್ಲ.

Tractors and Power Tillers in the State

383. Sri KAGODU THIMMAPPA (Sagar).–

Will the Minister for Agriculture and Forests be pleased to state :–

(*a*) the number of Agriculturists in the state who own tractors and power tillers ;

(*b*) the average holdings of the agriculturists who own the tractors ;

(*c*) the average holdings of the agriculturists who own the power tillers ;

(*d*) the annual demand for tractors and power tillers in the State ;

(*e*) the arrangements made by the Government to meet this demand and through which agency ?

Sri K. H. PATIL (Minister for Agriculture and Forests).—

(*a*) Tractors	...	4789
Power tillers	...	1200
(*b*) 40 acres.		
(*c*) 4 acres.		
(*d*) Tractors	...	1200
Tillers	...	200

(*e*) The details are furnished in the statement placed on the Table of the House.*

ಶ್ರೀ ಕಾಗೋಡು ತಿಮ್ಮಪ್ಪ.—ಈ ಭಾಗದಲ್ಲಿ ಕೊಟ್ಟ ಉತ್ತರದ ಪ್ರಕಾರ ನಮ್ಮ ರಾಜ್ಯದಲ್ಲಿ ಪ್ರತಿವರ್ಷ 1200 ಟ್ರಾಕ್ಟರುಗಳು. ಮತ್ತು 200 ಟಿಲ್ಲರ್ಸ್‌ಗಳಿಗೆ ಬೇಡಿಕೆ ಇದೆಯೆಂದು ಹೇಳುತ್ತೀರಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಇರಬೇಕಾದರೆ ನಮ್ಮ ರಾಜ್ಯದಲ್ಲಿ ಇಂಥ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ತಾವು ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಆಗಲೇ ಯೋಚನೆ ಮಾಡಿದ್ದೇವೆ, ರಷ್ಯಾದವರೊಡನೆ ವ್ಯವಹಾರ ಸಂಬಂಧವನ್ನು ಬೆಳಸಿಕೊಂಡು, ಟ್ರಾಕ್ಟರ್ ಕಾರ್ಖಾನೆಯನ್ನು ಮಾಡಬೇಕು ಎಂದು ಪ್ರಯತ್ನ ನಡೆದಿದೆ. ಈ ಬಗ್ಗೆ ಕೇಂದ್ರಸರ್ಕಾರಕ್ಕೆ, ಪರವಾನಿಗೆ ಬಗ್ಗೆ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ನವರು ಅರ್ಜಿಯನ್ನು ಹಾಕಲಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಕಾರ್ಖಾನೆ ಮಾಡತಕ್ಕ ಸಂದರ್ಭದಲ್ಲಿ ಬೆಂಗಳೂರು ಅಥವಾ ಹುಬ್ಬಳ್ಳಿಯಂಥ ದೊಡ್ಡ ನಗರಗಳಲ್ಲಿ ಈ ಕಾರ್ಖಾನೆಯನ್ನು ಹಾಕುವುದಕ್ಕಿಂತ ಕಾರ್ಖಾನೆಗಳು ಇಲ್ಲದೆ ಇರತಕ್ಕಂಥ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಕೇಂದ್ರದ ಪರವಾನಿಗೆ ಬಂದನಂತರ, ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಸ್ಥಳದಲ್ಲಿ ಸ್ಥಾಪನೆ ಮಾಡೋಣ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಟ್ರಾಕ್ಟರ್ ಅನ್ನು ತಯಾರುಮಾಡುವುದಾದರೆ ಎಷ್ಟು ದರ ಅವಕ್ಕೆ ಬೀಳಬಹುದು ಎಂದು ಅಂದಾಜು ಮಾಡಿದ್ದೀರಿ?

ಶ್ರೀ ಕೆ. ಎಚ್. ಪಾಟೀರ್.—ನಧ್ಯದಲ್ಲಿ ನನ್ನಲ್ಲಿ ಆ ಮಾಹಿತಿ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಡು.—ನಮ್ಮ ರಾಜ್ಯದಲ್ಲಿ ಸುಮಾರು 4000 ಟ್ರಾಕ್ಟರ್‌ಗಳನ್ನು ಮತ್ತು ಒಂದುಸಾವಿರ ಟಿಲ್ಲರುಗಳನ್ನು ಜನ ಪಡೆದಿದ್ದಾರೆ ಎಂದು ಹೇಳಿದಿರಿ, ಟ್ರಾಕ್ಟರ್ ಕೊಟ್ಟವರಿಗೆ ರಿಪೇರಿ ಮಾಡಿಸುವುದಕ್ಕೆ ತೊಂದರೆಯಾಗಿದೆ, ಪೆ ವೈವೇಟ್ ಪಬ್ಲಿಸಿಗೆ ಹೋದಾಗ ಅವರು ಹೆಚ್ಚಿಗೆ ಚಾರ್ಜು ಮಾಡುತ್ತಾರೆ, ಆದ್ದರಿಂದ ಸರ್ಕಾರದ ವತಿಯಿಂದ ಸೆಂಟ್ರಲ್ ಟ್ರಾಕ್ಟರ್ ಆರ್ಗನೈಸೇಷನ್ ಎಂದು ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಈಗಾಗಲೇ ಮಾಡಾಗಿದೆ, ಎಲ್ಲೆಲ್ಲಿ ಕೇಂದ್ರದವರು ಟ್ರಾಕ್ಟರ್‌ಗಳನ್ನು ಇಟ್ಟಿದ್ದಾರೋ ಅಂಥ ಕಡೆ ಟ್ರಾಕ್ಟರ್ ರಿಪೇರಿ ಕೆಲಸ ಒದಗಿಸಲಕ್ಕೆ ಪ್ರಾರಂಭಮಾಡಿದ್ದೇವೆ.

ಶ್ರೀ ಕೆ. ವೆಂಕಟಪ್ಪ.—ತಾವು ಏ ೦ ಟ್ರಾಕ್ಟರ್, ಪವರ್ ಟಿಲ್ಲರ್ ಅನ್ನು ಹೊರ ದೇಶದಿಂದ ತರಿಸಿದಾಗ ಇರತಕ್ಕಂಥ ಬೆಲೆಗೂ ಮತ್ತು ಈಗ ಇಲ್ಲಿ ಕೊಡತಕ್ಕ ಬೆಲೆಗೂ ಎಷ್ಟು ವ್ಯತ್ಯಾಸ ಇದೆ ? ತಾವು ಈ ಕಾರ್ಖಾನೆಯನ್ನು ಪ್ರಾರಂಭಮಾಡಿದಾಗ ಕಡಿಮೆ ಬೆಲೆಯುಳ್ಳ ಟ್ರಾಕ್ಟರನ್ನು ಮಾರಲಕ್ಕೆ ಸಾಧ್ಯವೇ ?

ಶ್ರೀ ಕೆ. ಎಚ್. ಪಾಟೀರ್.—ನಾವು ಇಲ್ಲಿ ಪ್ರಯತ್ನ ಮಾಡುತ್ತೇವೆ. ಖಂಡಿತವಾಗಿ ನಿಶ್ಚಿತ ಬೆಲೆಗೆ ಸಿಕ್ಕುತ್ತದೆ ಆದರೆ ಎಕ್ಸೈಜ್ ಡ್ಯೂಟಿ ನೋಡಿದರೆ ಮೂರನೇ ಒಂದುಭಾಗ ಎಕ್ಸೈಸ್ ಡ್ಯೂಟಿ ಟ್ರಾಕ್ಟರ್ ಮೇಲೆ ಹಾಕುತ್ತಾರೆ. ಅದುದರಿಂದ ನಾವು ಮಾಡಿದರೆ ಇದನ್ನು ಉಳಿಸುವುದಕ್ಕೆ ಸಾಧ್ಯವಿದೆ.

---

*Copy pleased in the Mysore Legislature Library *Vide* No. 11, dated 12th March 1973.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಜ್ಯದಲ್ಲಿ ಉದಾಹರಣೆಗೆ ಹೇಳುವುದಾದರೆ ಒಬ್ಬ ತರುಣರು ಕೊಪ್ಪದಲ್ಲಿ ಟ್ರಾಕ್ಟರನ್ನು ಅವರೇ ಸೃಷ್ಟಿಮಾಡಿದ್ದಾರೆ ಸುಲಭವಾಗಿ ಮತ್ತು ಚೆನ್ನಾಗಿ ಮಾಡಿದ್ದಾರೆ. ಈಗ ಇರತಕ್ಕ ಎರ್ಲಾ ನಮೂನೆಗಳನ್ನು ಅನುಸರಿಸಿ ಉತ್ತಮರೀತಿ ಮಾಡಿದ್ದಾರೆ. ಅದನ್ನು ರಸ್ತೆಯಲ್ಲಿ ಬಿಟ್ಟಿಲ್ಲ ಅದಕ್ಕೂ ಲೈಸನ್ಸ್ ಬೇಕು ಎಂದು ಕಿರುಕುಳ ಕೊಡುತ್ತಿದ್ದಾರೆ. ಅಂಥವರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡುವುದರ ಮೂಲಕ ನಮ್ಮ ರಾಜ್ಯದಲ್ಲಿರುವ ಪ್ರತಿಭೆಗೆ ಪ್ರಕಾಶನ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅನೇಕ ಸಂದರ್ಭಗಳಲ್ಲಿ ಹಳ್ಳಿಗಳಲ್ಲಿ ಮೂಲೆಮೂಲೆಯಲ್ಲಿ ನಿಷ್ಣಾತರೂ ಇದ್ದರೂ ಸಹಿತ ಇಂಡಸ್ಟ್ರೀಯಲ್ ರಿಗುಲೇಷನ್ ಲೈಸನ್ಸ್ ತೆಗೆದುಕೊಳ್ಳಬೇಕು ಎಂದು ಇರುವಾಗ ದೇಶದಲ್ಲಿ ಎಲ್ಲರೂ ತೆಗೆದುಕೊಳ್ಳಲೇಬೇಕು. ಅದು ಕೂಡ ನಮ್ಮ ರಾಜ್ಯನರ್ಕಾರದ ಹಿಡಿತದಲ್ಲಿ ಇಲ್ಲ. ಕೇಂದ್ರನರ್ಕಾರದ ನಿಯಂತ್ರಣಕ್ಕೆ ಒಳಗಾಗಿದೆ. ಅದಕ್ಕೆ ಈ ಪ್ರಶ್ನೆ ಪಾರ್ಲಿಮೆಂಟಿನಲ್ಲಿ ಕೇಳುವುದು ಒಳ್ಳೆಯ ಊಹೆ.

ಶ್ರೀ ಎಂ. ಬಿ. ರಾಮಸ್ವಾಮಿ.—(ಬ) ಉತ್ತರವಾಗಿ 40 ಎಕರೆ ಇರಬೇಕು ಪವರ್ ಟ್ರಾಕ್ಟರ್ ಬೇಕಾದರೆ ಎಂದು ಇದೆ. 40 ಎಕರೆ ಇಲ್ಲದೇ ಇರುವವರು ಬಹುಭಾಗ ಜನ ಬೇರೆ ವಿಧದಲ್ಲಿ ಉಪಯೋಗಿಸುತ್ತಿದ್ದಾರೆ. 40 ಎಕರೆ ಮೇಲ್ಪಟ್ಟವರಿಗೆ ಕೊಟ್ಟರೆ ಹೆಚ್ಚಿಗೆ ಉತ್ಪನ್ನ ಮಾಡುವುದಕ್ಕೆ ಸಾಧ್ಯ. ಆ ರೀತಿ ಆದೇಶ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—40 ಎಕರೆ ಸರಾಸರಿ ಇದ್ದವರು ಟ್ರಾಕ್ಟರ್ ಪಡೆದಿದ್ದಾರೆ ಎಂದು ಕೇಳಿದ್ದಾರೆ, ಅವಕ್ಕೆ ನಾಲ್ಕುಎಕರೆ ಅಥವಾ ಒಂದುಎಕರೆ ಇದ್ದರೂ ರೂಪಾಯಿ ಕೊಡುತ್ತೇವೆ. ಟ್ರಾಕ್ಟರ್ ಕೊಡಬೇಕೆಂದು ಕೇಳಿದರೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಟಿಲ್ಲರ್ ಪಡೆಯುವಾಗ ಸರಾಸರಿ 4 ಎಕರೆ ಹಿಡುವಳಿದಾರರು ಇದ್ದರೆ ಸಾಕು ಎಂದು ಹೇಳುತ್ತೀರಿ. ಅವರು ಕೊಂಡಿರತಕ್ಕ ಜಮೀನಿನ ಬೆಲೆಗೂ ಟಿಲ್ಲರ್ ಪಡೆಯ ಬೇಕಾದರೆ ಸೊಸೈಟಿ ಮುಖಾಂತರ ಪಡೆಯತಕ್ಕ ಸಂದರ್ಭದಲ್ಲಿ ಟಿಲ್ಲರ್ ಬೆಲೆಗೂ ಹೊಂದಾಣಿಕೆ ಯಾಗತಕ್ಕ ಅಸ್ತಿ ಬೆಲೆಗೂ ಏನಾದರೂ ಸಾಮ್ಯ ಇರಬೇಕು. ಕಡಿಮೆ ಬೆಲೆ ಅಸ್ತಿ ಇರುವ ಸಣ್ಣ ಹಿಡುವಳಿದಾರರಿಗೆ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಟಿಲ್ಲರ್ಸ್ ತೆಗೆದುಕೊಂಡ ಜನಗಳ ಅಸ್ತಿ ಅವರೇಜ್ ಎಷ್ಟು ಬರುತ್ತದೆ ಎಂದು ಪ್ರಶ್ನೆ ಹಾಕಿದ್ದರು. ಅದಕ್ಕೆ ಅವರೇಜ್ 40 ಎಕರೆ ಬರುತ್ತದೆ. ಟಿಲ್ಲರ್ಸ್ ಕೊಡುವಾಗ ಸ್ವಂತ ವ್ಯವಹಾರವನ್ನು ಮಾಡಿಕೊಂಡು ಕೆಲಸ ಮಾಡುತ್ತಾರೆ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಾಲ ಕೊಡುವಾಗ ನಿಜವಾದ ಅಸ್ತಿ ಬೆಲೆಗೆ ಹೊಂದಾಣಿಕೆ ಬೆಲೆನೋಡಿ ಬ್ಯಾಂಕ್ ಅಥವಾ ಆಗ್ರೋ ಇಂಡಸ್ಟ್ರೀಸ್‌ನಿಂದ ಕೊಡುತ್ತಾರೆ ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

Tour Programme of Central and State Ministers

403. Sri KONANDUR LINGAPPA (Thirthahalli).—

Will the Chief Minister be pleased to state :—

(*a*) whether Dr. Sarojini Mahisi, a Central Minister paid a visit to Thirthahalli Taluk of Shimoga District during the last two months ;

(*b*) if so, whether it has come to the notice of the Government that Central an State Ministers tour and take part in functions without intimating the local legislators ;

(*c*) the policy of the State Government in this behalf ?